ದಿನಾಂಕಃ **16.07.2026**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **2** ರಿಂದ **10** ನೇ ಪ್ರತಿವಾದಿ ಪರ ಶ್ರೀ ಜಿ.ಕೆ. ವಕೀಲರಿಂದಃ</u>

ನನ್ನ ತಂದೆ ತಾಯಿಗೆ ನಾನು ಒಬ್ಬನೇ ಮಗ ಎಂದರೆ ಸರಿ. ಸಾಕ್ಷಿ ಮುಂದುವರೆದು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ತಂದೆ ತಾಯಿ ಜೀವಂತವಾಗಿ ಇರುವವರೆಗೂ ನಾನು ಅವರೊಂದಿಗೆ ವಾಸವಾಗಿದ್ದೇನು ಎಂದರೆ ಸರಿ. ನನ್ನ ತಾಯಿ 2012 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ನನ್ನ ತಾಯಿ ತೀರಿಕೊಂಡ ನಂತರ ತೀರಿಕೊಂಡಿರುತ್ತಾರೆ ಎಂದರೆ ಸರಿ. ನಿಮ್ಮ ತಾಯಿ ತೀರಿಕೊಳ್ಳುವ ಪೂರ್ವದಲ್ಲಿ ಹಲವಾರು ವರ್ಷಗಳು ಕಾಯಿಲೆಯಿಂದ ಇದ್ದ ಕಾರಣ ನೀವು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೀರ ಎಂದು ಸೂಚಿಸಿದ್ದಕ್ಕೆ ಸಾಕ್ಷಿ 1 ನೇ ಪ್ರತಿವಾದಿಯ ಆಸ್ಪತ್ರೆಗೆ ನನ್ನ ತಾಯಿಯೇ ಹೋಗುತ್ತಿದ್ದರು ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ಸುಮಾರು 5-6 ವರ್ಷಗಳ ಕಾಲ 1 ನೇ ಪ್ರತಿವಾದಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಕೊಂಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ 1 ವರ್ಷ ಮಾತ್ರ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ ನಾವು ಮತ್ತು 1 ನೇ ಪ್ರತಿವಾದಿ ಒಂದೇ ಕುಲಸ್ಥರು ಆಗಿರುತ್ತೇವೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸಹಾಯ ಬೇಕಿದ್ದಲ್ಲಿ 1 ನೇ ಪ್ರತಿವಾದಿಯೇ ಸಹಾಯ ಮಾಡುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ.

2. ಪುಟ್ಟತಿಮ್ಮಯ್ಯರವರು ನನ್ನ ತಾಯಿಯ ವಿರುದ್ಧ ಹೂಡಿದ್ದಂತಹ ದಾವೆಯಲ್ಲಿ 1 ನೇ ಪ್ರತಿವಾದಿ ನಮಗೆ ಸಹಾಯ ಮಾಡಲು ಸಾಕ್ಷಿ ನುಡಿದಿರುತ್ತಾರೆ ಎಂದು ಸೂಚಿಸುವುದು

ಸರಿಯಲ್ಲ. 1 ನೇ ಪ್ರತಿವಾದಿಯ ಪರಿಚಯ ನನಗೆ ಇರುವುದಿಲ್ಲ. ಪುಟ್ಟತಿಮ್ಮಯ್ಯರವರು ನನ್ನ ತಾಯಿಯ ವಿರುದ್ಧ ಹೂಡಿದ್ದಂತಹ ದಾವೆಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತು ಈ ದಾವೆಯನ್ನು ಹೂಡುವ ಸಮಯದಲ್ಲಿ ಜಮೀನಾಗಿಯೇ ಉಳಿದಿತ್ತು. ಈ ದಾವೆಯನ್ನು ಹೂಡುವ ಕಾಲಕ್ಕೆ ದಾವಾ ಸ್ವತ್ತಿನಲ್ಲಿ ನಿವೇಶನಗಳನ್ನು ಮಾಡಿದ್ದರು ಎಂದು ಸೂಚಿಸುವುದು ಸರಿಯಲ್ಲ.

3. ದಾವಾ ಸ್ವತ್ತನ್ನು ನನ್ನ ಮಾವ ನನ್ನ ತಾಯಿಗೆ ಧಾನ ಕೊಟ್ಟಿರುತ್ತಾರೆ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಾಯಿ ತೀರಿಕೊಂಡ ನಂತರ ದಾವಾ ಸ್ವತ್ತಿನ ಖಾತೆ ನನ್ನ ಹೆಸರಿಗೆ ವರ್ಗಾವಣೆಯಾಗಿರುವುದಿಲ್ಲ ಸಾಕ್ಷಿ ಮುಂದುವರೆದು ಕೋರ್ಟಿನಲ್ಲಿಯೇ ಇರುತ್ತದೆ ಎಂದು ಉತ್ತರಿಸುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪಹಣಿಯ ಕಾಲಂ ನಂ.9 ರಲ್ಲಿ ಎನ್ ಎ ಕರಾಬು ಎಂದು ನಮೂದಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. 1993-94 ರಲ್ಲಿಯೇ ಸರ್ವೆ.ನಂಬರ್.5/2 ಅಸ್ಥಿತ್ವದಲ್ಲಿ ಇರುವುದಿಲ್ಲ ಎಂದು ಸರ್ಕಾರದಿಂದ ಎನ್ ಎ ಕರಾಬು ಎಂದು ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ಸಾಗುವಳಿ ಮಾಡುತ್ತಿರುತ್ತೇವೆ ಎಂದು ಉತ್ತರಿಸುತ್ತಾರೆ. ದಾವಾ ಸರ್ವೆ.ನಂಬರ್ ಪಹಣಿಯಲ್ಲಿ ಕಾಲಂ ನಂ.12 ರಲ್ಲಿ ನನ್ನ ತಾಯಿಯ ಹೆಸರು ತಪ್ಪಾಗಿ ನಮೂದಾಗಿರುವುದನ್ನು ದುರುಪಯೋಗ ಪಡಿಸಿಕೊಂಡು ಈ ದಾವೆಯನ್ನು ಹೂಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

4. 1 ನೇ ಪ್ರತಿವಾದಿ ನನ್ನ ತಾಯಿಯ ಜಿ.ಪಿ.ಎ. ಹೋಲ್ಡರ್ ಆಗಿ 8 ನೇ ಪ್ರತಿವಾದಿಯ ಮಗಳಾದ ಅನಿತರವರಿಗೆ ದಿಃ17.06.1995 ರಂದು ಸರ್ವೆ.ನಂಬರ್.5/2 ರಲ್ಲಿ ಮಾಡಿರುವಂತಹ 12 ನಿವೇಶನಗಳಿಗೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಕ್ರಯಪತ್ರಕ್ಕೆ ನನ್ನ ತಾಯಿ ಒಪ್ಪಿಗೆಯನ್ನು ಸೂಚಿಸಿ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆಯ ಹೆಸರು ತಿಮ್ಮಯ್ಯ. ನನ್ನ ತಂದೆಯ ತಂದೆ ಹೆಸರು ಚಿನ್ನಮನ್ನಯ್ಯ. ನನ್ನ ತಂದೆ ಅವರು ಜೀವಂತವಾಗಿ ಗುರುವಡೆಯರಹಳ್ಳಿ ಗ್ರಾಮದಲ್ಲಿಯೇ ವಾಸವಾಗಿದ್ದರು. ನನ್ನ ತಂದೆ ಸಹಿ ಮಾಡುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ. 1 ನೇ ಪ್ರತಿವಾದಿ ನನ್ನ ತಾಯಿಯ ಪರವಾಗಿ ಬರೆದುಕೊಟ್ಟಂತಹ ಕ್ರಯಪತ್ರಕ್ಕೆ ನನ್ನ ತಂದೆಯು ಸಹ ಸಹಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಾಯಿ 1 ನೇ ಪ್ರತಿವಾದಿಗೆ ಬರೆದುಕೊಟ್ಟಂತಹ ನೊಂದಣಿ ಅಧಿಕಾರ ಪತ್ರದ (ಜಿ.ಪಿ.ಎ) ಆಧಾರದ ಮೇರೆಗೆ 1 ನೇ ಪ್ರತಿವಾದಿ 2 ರಿಂದ 10 ರವರಿಗೆ ಸರ್ವೆ.ನಂಬರ್.5/2 ರಲ್ಲಿ ಮಾಡಿರುವ ನಿವೇಶನಗಳಿಗೆ ಸಂಬಂಧಿಸಿದಂತೆ ಕ್ರಯಪತ್ರಗಳನ್ನು ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

5. ಪ್ರಸ್ತುತ ದಾವಾ ಸ್ವತ್ತು ಸಂಪೂರ್ಣವಾಗಿ 1993-94 ರಲ್ಲಿಯೇ ನಿವೇಶನಗಳಾಗಿ ವಿಂಗಡಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. 1993-94 ರಿಂದ ದಾವಾ ಸ್ವತ್ತು ಕೃಷಿ ಸಾಗುವಳಿ ಜಮೀನು ಆಗಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆ ತಾಯಿ ಅವರ ಜೀವಿತ ಕಾಲದಲ್ಲಿಯೇ ದಾವಾ ಸ್ವತ್ತನ್ನು ಸಂಪೂರ್ಣವಾಗಿ ಮಾರಾಟ ಮಾಡಿದ್ದರು ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆ ತಾಯಿ ಸರ್ವೆ.ನಂಬರ್.5/2 ರಲ್ಲಿ ಸಂಪೂರ್ಣವಾಗಿ ಜಮೀನನ್ನು ಮಾರಾಟ ಮಾಡಿರುವುದರಿಂದ ದಾವಾ ಸ್ವತ್ತಿನಲ್ಲಿ ನನಗೆ

ಯಾವುದೇ ಹಕ್ಕು ಅಥವಾ ಸ್ವಾಧೀನ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತು ಮಧುಗಿರಿ-ಗೌರಿಬಿದನೂರು ಹೆದ್ದಾರಿಗೆ ಹೊಂದಿಕೊಂಡಿರುವುದರಿಂದ ಪ್ರತಿವಾದಿಗಳಿಂದ ಅಕ್ರಮವಾಗಿ ಲಾಭ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ